ನಿಮ್ಮೊಡನೆ

ಇನ್ನು ಕೆಲವೇ ದಶಕಗಳಲ್ಲಿ ಭಾರತ, ವಿಶ್ವದ ಅತಿ ಹೆಚ್ಚಿನ ಜನಸಂಖ್ಯೆ ಇರುವ ರಾಷ್ಟ್ರವಾಗಲಿದೆ. ಈ ದೊಡ್ಡ ಜನಸಂಖ್ಯೆಗೆ ಸರಿಯಾದ ಪೋಷಣೆ, ಉದ್ಯೋಗ ಹಾಗೂ ಭದ್ರತೆ ಇಲ್ಲದಿದ್ದಲ್ಲಿ, ರಾಷ್ಟ್ರದ ಅಭಿವೃದ್ಧಿ ಪಥಕ್ಕೆ ದೊಡ್ಡ ತೊಡಕಾಗಲಿದೆ.

# ಜನಸಂಖ್ಯಾ ಸ್ಫೋಟಕ್ಕೆ ಕಡಿವಾಣ ಹೇಗೆ?

ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಜನಸಂಖ್ಯೆಯ ರಾಷ್ಟ್ರ ಯಾವುದು? ಚೀನಾ ಎಂಬುದು ಸದ್ಯದ ಉತ್ತರ. ಆದರೆ 2050ರೊಳಗೆ ಈ ಪಟ್ಟ ಭಾರತಕ್ಕೆ ದೊರಕಲಿದೆ.

ಕಳೆದ ನೂರು ವರ್ಷಗಳಲ್ಲಿ ಭಾರತದ ಜನಸಂಖ್ಯೆ ಐದು ಪಟ್ಟು ಏರಿಕೆಯಾಗಿದೆ. ಈಗ ನಾವು 116 ಕೋಟಿಯಾಗಿದ್ದೇವೆ. 2026ರೊಳಗೆ ನಮ್ಮ ಜನಸಂಖ್ಯೆ 140 ಕೋಟಿಯಾಗುವ ಎಲ್ಲಾ ನಿರೀಕ್ಷೆ ಇದೆ. ಚೀನಾ ಜೊತೆ ಹೋಲಿಸಿದಲ್ಲಿ ನಮ್ಮ ಜನಸಂಖ್ಯೆ ಏರಿಕೆ ಪ್ರಮಾಣ ಇನ್ನೂ ಇಳಿಮುಖವಾಗಲೇ ಇಲ್ಲ. ಅಂಕಿ ಅಂಶಗಳನ್ನೇ ನೋಡಿ. ಕಳೆದ ಐದು ವರ್ಷಗಳಲ್ಲಿ ನಮ್ಮ ಜನಸಂಖ್ಯೆ ಶೇ.1.4ರ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಚೀನಾದ ಜನಸಂಖ್ಯಾ ಏರಿಕೆ ಪ್ರಮಾಣ ಕೇವಲ ಶೇ.0.6ರಷ್ಟಿತ್ತು.

ನಿಜ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನಸಂಖ್ಯೆಯನ್ನು ನಕಾರಾತ್ಮಕವಾಗಿ ಯಾಕೆ ನೋಡಬೇಕು ಎಂಬಂತಹ ಸಿದ್ಧಾಂತ ಚಾಲ್ತಿ ಪಡೆದಿದೆ. ಭಾರತಕ್ಕೆ ಜನಸಂಖ್ಯೆಯೇ ದೊಡ್ಡ ವರವಾಗಲೂಬಹುದು ಎಂಬಂತಹ ವಾದ ಇದು. ಏಕೆಂದರೆ ವಿಶ್ವದಾದ್ಯಂತ ಅನೇಕ ರಾಷ್ಟ್ರಗಳಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿರುವ ವಿದ್ಯಮಾನವನ್ನು ನಾವು ಕಾಣುತ್ತಿದ್ದೇವೆ. ಆದರೆ ನಮ್ಮದು 'ಯುವ ಭಾರತ' ಎಂಬಂತಹ ಹೆಮ್ಮೆ. ಏಕೆಂದರೆ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.50ರಷ್ಟು ಮಂದಿ 25 ವರ್ಷಕ್ಕೂ ಕಡಿಮೆ ವಯಸ್ಸಿನವರು. ಇದೇ ರೀತಿ, 15ರಿಂದ 59ರೊಳಗಿರುವಂತಹ ದುಡಿಯುವ ವಯೋಮಾನದ ಜನರ ಪ್ರಮಾಣ 2020ರೊಳಗೆ ಒಟ್ಟು ಜನಸಂಖ್ಯೆಯಲ್ಲಿ ಶೇ. 64ರಷ್ಟಿರುತ್ತದೆ. ಹೀಗಾಗಿ ದುಡಿಯುವ ವಯಸ್ಸಿನ ಜನಶಕ್ತಿ ಭಾರತದ ಬಲ ಎಂಬಂತಹ ಮಾತುಗಳಿವೆ.

ಆದರೆ ಜನರೇ ಆಸ್ತಿ ಎಂದು ಸುಮ್ಮನಿರಲಾದೀತೆ? ಈ ದೊಡ್ಡ ಜನಸಂಖ್ಯೆಗೆ ಸರಿಯಾದ ಪೋಷಣೆ, ಉದ್ಯೋಗ ಹಾಗೂ ಭದ್ರತೆ ಇಲ್ಲದಿದ್ದಲ್ಲಿ ಅದು ಭಾರತದ ಬಲ ಆಗುವುದಾದರೂ ಹೇಗೆ? ಸ್ವಾತಂತ್ರ್ಯ ಬಂದ ನಂತರದ ಈ ಆರು ದಶಕಗಳಲ್ಲಿ ಅಭಿವೃದ್ಧಿಯ ಫಲ ಎಲ್ಲರನ್ನೂ ತಲುಪದಿರಲು ಕಾರಣವೇನು? ಹೆಚ್ಚಿನ ಜನಸಂಖ್ಯೆಯೇ ಕಾರಣ ಎಂದು ಮತ್ತೆ ನಾವೇ ದೂರುತ್ತೇವೆ. ಅನಕ್ಷರತೆ, ಅಪೌಷ್ಟಿಕತೆ, ನಿರುದ್ಯೋಗ, ಪುರುಷ– ಮಹಿಳೆ ಅನುಪಾತದಲ್ಲಿ ಭಾರಿ ವ್ಯತ್ಯಾಸ... ಇಂತಹ ಮೂಲ ಸಮಸ್ಯೆಗಳು ನಮ್ಮ ಅಭಿವೃದ್ಧಿಗೆ ಯಾವತ್ತೂ ಅಡ್ಡಗಾಲುಗಳೇ ಎಂಬುದನ್ನು ನಾವು ಮರೆಯಲಾಗದು.

ಶಿಶು ಮರಣ ಪ್ರಮಾಣ ಇನ್ನೂ ನಮ್ಮಲ್ಲಿ ಕಡಿಮೆ ಆಗಲೇ ಇಲ್ಲ. ಇದೂ ಸಹ ಹೆಚ್ಚು ಹೆಚ್ಚು ಮಕ್ಕಳನ್ನು ಹೆರಲು ಪ್ರೇರೇಪಿಸಲು ಮುಖ್ಯ ಕಾರಣ. ಭಾರತದಲ್ಲಿ ಶಿಶು ಮರಣ ಪ್ರಮಾಣ ದರವನ್ನು ಗಮನಿಸಿ. ಹುಟ್ಟಿದ ಪ್ರತಿ 1000 ಮಕ್ಕಳಲ್ಲಿ 53 ಮಕ್ಕಳು ಒಂದು ವರ್ಷದೊಳಗೇ ಮರಣವಪ್ಪಿರುವ ಅಂಕಿ ಅಂಶ 2009ರಲ್ಲಿ ದಾಖಲಾಗಿದೆ. ವಿಶ್ವದಾದ್ಯಂತ ಈ ಪ್ರಮಾಣ 46 ಇದೆ. ಉತ್ತರ ಪ್ರದೇಶದಲ್ಲಂತೂ ಹುಟ್ಟಿದ 1000 ಮಕ್ಕಳಲ್ಲಿ 96 ಮಕ್ಕಳು ಮೊದಲ ಹುಟ್ಟು ಹಬ್ಬ ಆಚರಿಸುವ ಮೊದಲೇ ತೀರಿಕೊಳ್ಳುತ್ತಿವೆ. ಇಷ್ಟೊಂದು ಹೆಚ್ಚಿನ ಪ್ರಮಾಣದ ಶಿಶು ಮರಣ ಪ್ರಕರಣಗಳಿಗೆ ಕಾರಣವಾದರೂ ಏನು? ಆರೋಗ್ಯ ಕ್ಷೇತ್ರ ಇದರ ಹೊಣೆ ಹೊರುವುದಿಲ್ಲವೆ? ಎಂಬುದು ಪ್ರಶ್ನೆ. ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಯಾವ್ಯಾವ ರಾಷ್ಟ್ರಗಳು ಎಷ್ಟು ಹಣ ವಿನಿಯೋಗಿಸುತ್ತವೆ ಎಂಬುದನ್ನು ಪಟ್ಟಿ ಮಾಡಿರುವ 175 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತದ ಸ್ಥಾನ 171ರಲ್ಲಿದೆ ಎಂಬ ಮಾಹಿತಿ ಬಹುಶಃ ಇದಕ್ಕೆ ಉತ್ತರ. ಹೀಗಾಗಿಯೇ 11ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚವನ್ನು ಜಿಡಿಪಿ (ಒಟ್ಟು ದೇಶಿ ಉತ್ಪನ್ನ)ಯ ಶೇ.2ರಷ್ಟಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಈಗ ಇದ್ದ ಪ್ರಮಾಣ ಶೇ.1.45. 2012ರೊಳಗೆ ಶಿಶು ಮರಣ ಪ್ರಮಾಣವನ್ನು 1000ಕ್ಕೆ 30 ಶಿಶುಗಳಿಗೆ ಇಳಿಸುವ ಯೋಜನೆ ಹೊಂದಲಾಗಿದೆ.

18 ತುಂಬುವ ಮೊದಲೇ ಹೆಣ್ಣುಮಕ್ಕಳಿಗೆ ವಿವಾಹ ಮಾಡುವ ಪದ್ಧತಿಯೂ ಜನಸಂಖ್ಯಾ ಸ್ಫೋಟಕ್ಕೆ ಕೊಡುಗೆ ಸಲ್ಲಿಸುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಮಹಿಳೆಯರನ್ನು ಸಬಲಗೊಳಿಸುವುದು ಅಗತ್ಯ. ಹೆಣ್ಣುಮಕ್ಕಳು ಹಾಗೂ ಮಹಿಳೆಯರ ಆರೋಗ್ಯ ಹಾಗೂ ಶಿಕ್ಷಣದ ಮೇಲಿನ ಹಣಹೂಡಿಕೆ ರಾಷ್ಟ್ರದ ಉತ್ಪಾದಕತೆ ಹಾಗೂ ಆದಾಯ ಹೆಚ್ಚಳಕ್ಕೂ ಕಾರಣವಾಗುತ್ತದೆ ಎಂಬುದನ್ನು ಮರೆಯದಿರೋಣ. ಇದಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹ ಮುಖ್ಯವಾಗುತ್ತದೆ. ಲಿಂಗ, ವಯಸ್ಸಿನ ಅನ್ವಯ ವರ್ಗೀಕರಿಸಲಾದ ಮಾಹಿತಿ, ಅಂಕಿ ಅಂಶಗಳು ಸರ್ಕಾರಗಳ ಮಟ್ಟಗಳಲ್ಲಿ ನೀತಿಗಳನ್ನು ನಿರೂಪಿಸಲು ಸಹಕಾರಿಯಾಗುತ್ತವೆ.

■ ಸಿ.ಜಿ. ಮಂಜುಳಾ

